ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಲಾಸ
ಸಂಪಾದಕ : ಮಂಜು ಬನವಾಸೆ
ಕನ್ನಡ ದಿನಪತ್ರಿಕೆ
ಹಾಸನ
E-mail : kannadapostnews@gmail.com / ಕನ್ನಡ post
Price: ₹1
Vol.No.01 | Issue. 297 | Pages. 2 | Date: 18-10-2025, SATURDAY
RNI NO: KARKAN/2024/89601
Kannada Daily
ಸಂಪುಟ : 01 – ಸಂಚಿಕೆ : 297 – ಪುಟಗಳು : 2 18-10-2025 ಶನಿವಾರ
Ph: 8762954248
ದರ : ₹1

# ಜನಸಂಖ್ಯೆ-ಆದಾಯದಲ್ಲಿ ಹಾಸನಾಂಬ ದಾಖಲೆ

## ಸರದಿ ಸಾಲಿನಲ್ಲಿ ನಿಂತು ಹೈರಾಣಾದ ಜನರು | ಜಿಲ್ಲಾಡಳಿತಕ್ಕೆ ನಿರ್ವಹಣೆ ಸವಾಲು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಕ್ತಿದೇವತೆ ಹಾಸನಾಂಬ ದರ್ಶನಕ್ಕೆ ಸಾಗರೋಪಾದಿಯಲ್ಲಿ ಭಕ್ತರು ಹರಿದು ಬರುತ್ತಿದ್ದು ಭಕ್ತರ ಸಂಖ್ಯೆ ಹಾಗೂ ಆದಾಯ ಎರಡರಲ್ಲೂ ಹಾಸನಾಂಬ ಈ ಬಾರಿ ದಾಖಲೆ ಬರೆದಿದ್ದಾಳೆ. ಶುಕ್ರವಾರ ಒಂದೇ ದಿನ 4 ಲಕ್ಷಕ್ಕೂ ಅಧಿಕ ಭಕ್ತರು ದರ್ಶನ ಪಡೆದಿದ್ದು, ಟಿಕೆಟ್ ಹಾಗೂ ಲಾಡು ಮಾರಾಟದಿಂದ ಆದಾಯವು 10.50 ಕೋಟಿ ರೂ. ಮೀರಿದೆ.

ರಾಜ್ಯದ ಮೂಲೆ ಮೂಲೆಯಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ವಿಶೇಷ ದರ್ಶನ, ಧರ್ಮ ದರ್ಶನದ ಸಾಲುಗಳು ಭರ್ತಿಯಾಗಿದ್ದರಿಂದ ಜನರು ಕಿಲೋ ಮೀಟರ್‌ಗಟ್ಟಲೆ ರಸ್ತೆಯಲ್ಲಿ ನಿಲ್ಲಬೇಕಾಯಿತು. 8 ರಿಂದ 10 ಗಂಟೆಗಳ ಕಾಲ ಧರ್ಮ ದರ್ಶನದ ಸಾಲಿನಲ್ಲಿ ನಿಂತು ದರ್ಶನ ಪಡೆದರೆ, 300ರೂ. ಟಿಕೆಟ್ ಪಡೆದುಕೊಳ್ಳಲು 3 ಗಂಟೆಗೂ ಹೆಚ್ಚುಕಾಲ ಕ್ಯೂನಲ್ಲಿ ನಿಲ್ಲಬೇಕಾಯಿತು. 300ರೂ. ವಿಶೇಷ ದರ್ಶನದ ಟಿಕೆಟ್ ಪಡೆದರೂ 5 ರಿಂದ 6 ಗಂಟೆಗಳ ಕಾಲ ದರ್ಶನಕ್ಕೆ ಕಾಯಬೇಕಾಯಿತು. 1,000 ರೂ. ಟಿಕೆಟ್ ಪಡೆಯಲು ನೂಕುನುಗ್ಗಲು ಉಂಟಾಯಿತು.

ಶುಕ್ರವಾರವಾದ್ದರಿಂದ ನಿರೀಕ್ಷೆಗೂ ಮೀರಿ ಮೂರುಪಟ್ಟು ಭಕ್ತರು ಆಗಮಿಸಿದ್ದರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಶಾಸಕರು, ಚಲನ ಚಿತ್ರ ನಟ-ನಟಿಯರು ಆಗಮಿಸಿ ದರ್ಶನ ಪಡೆದರು.

300ರೂ. ಟಿಕೆಟ್ ಪಡೆದುಕೊಳ್ಳಲು ಸರದಿ ಸಾಲಿನಲ್ಲಿ ಜನರು ನಗರ ಪ್ರದಕ್ಷಣೆ ಹಾಕುವಂತಾಯಿತು. ಪ್ರವೇಶ ದ್ವಾರದಿಂದ ಬಳಸಿ ಕಟ್ಟಿನಕೆರೆ ಮಾರುಕಟ್ಟೆ, ಕಸ್ತೂರಿ ಬಾ ರಸ್ತೆ, ನಗರ ಸಾರಿಗೆ ಬಸ್ ನಿಲ್ದಾಣ, ಹೊಸಲೈನ್ ರಸ್ತೆವರೆಗೂ ಇತ್ತು. 1,000ರೂ. ಟಿಕೆಟ್ ಸಾಲು ಪ್ರವೇಶ ದ್ವಾರದಿಂದ ಬಿ.ಎಂ.ರಸ್ತೆ ಮೂಲಕ ಸುವರ್ಣ ಹೋಟೆಲ್‌ವರೆಗೂ ಇತ್ತು. ಮಧ್ಯಾಹ್ನದ ಸರದಿ ಸಾಲಿನ ಪ್ರಮಾಣ ಕಡಿಮೆಯಾಯಿತು. 1 ಸಾವಿರರೂ. ಟಿಕೆಟ್ ಪಡೆದರೂ 3 ಗಂಟೆಗೂ ಹೆಚ್ಚು ಕಾಲ ಕ್ಯೂನಲ್ಲಿ ನಿಲ್ಲಬೇಕಾಯಿತು.

### ನಿರೀಕ್ಷೆ ಮೀರಿದ ಭಕ್ತರ ಸಂಖ್ಯೆ

ಹಾಸನಾಂಬ ದೇವಾಲಯಕ್ಕೆ ಸಾಗರೋಪಾದಿಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಭಕ್ತರು ನಿರೀಕ್ಷೆ ಮೀರಿ ಬರುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ದೇವಾಲಯ ಆವರಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಕ್ಷಾಂತರ ಭಕ್ತರ ಆಗಮನ ಜಿಲ್ಲಾಡಳಿತಕ್ಕೆ ಸವಾಲಾಗಿದೆ. ಶುಕ್ರವಾರ ಮಧ್ಯಾಹ್ನದವರೆಗೆ 1.60 ಲಕ್ಷ ಜನರು ಆಗಮಿಸಿದ್ದು, ಇಂದು ಮೂರು ಲಕ್ಷಕ್ಕೂ ಅಧಿಕ ಭಕ್ತರು ದರ್ಶನ ಪಡೆಯುವ ಸಾಧ್ಯತೆ ಇದೆ. 1000, 300 ರೂ. ವಿಶೇಷ ದರ್ಶದ ಸಾಲುಗಳು ಕೂಡ ಭರ್ತಿಯಾಗಿವೆ.



ನಾನೇ ಧರ್ಮ ದರ್ಶನದ ಸಾಲಿನಲ್ಲಿ ಬಂದು ಮೂರು ಗಂಟೆ ನಂತರ ದರ್ಶನ ಪಡೆದಿದ್ದೇನೆ. ಈಗ ಆ ರೀತಿ ಇಲ್ಲ, ಸಮಯ ಹೆಚ್ಚಾಗುತ್ತಿದೆ. ಕೆಲವು ಭಕ್ತರು ಅಸಮಾಧಾನ ತೋಡಿಕೊಳ್ಳುತ್ತಿದ್ದಾರೆ. ಬೆಳಗ್ಗೆ 7 ಗಂಟೆಗೆ ಸರತಿ ಸಾಲಿನಲ್ಲಿ ನಿಂತವರು ಸಂಜೆ 4 ಗಂಟೆಗೆ ದೇವಿ ದರ್ಶನ ಪಡೆದು ಹೊರ ಬಂದಿದ್ದಾರೆ. ಗರ್ಭಗುಡಿ ಬಳಿ ನೂಕುತ್ತಿದ್ದಾರೆ ಎಂದು ಕೆಲವರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಒಂದು ನಿಮಿಷಕ್ಕೆ 120-150 ಭಕ್ತರನ್ನು ಕಳುಹಿಸಲಾಗುತ್ತಿದೆ. ಇಲ್ಲವಾದಲ್ಲಿ ಲಕ್ಷಾಂತರ ಜನ ದರ್ಶನ ಪಡೆಯಲು ಸಾಧ್ಯವಿಲ್ಲ. ಭಕ್ತರು ಶಾಂತಿಯಿಂದ ಸಹಕರಿಸಬೇಕು. ಯಾರಾದರೂ ತಳ್ಳಿದ್ದರೆ ಕ್ಷಮೆ ಇರಲಿ. ಒಂದೆರಡು ಸೆಕೆಂಡ್‌ನಲ್ಲಿ ಮಾತ್ರ ದೇವಿ ದರ್ಶನ ಪಡೆಯಬಹುದು. 1000 ರೂ. 300 ರೂ. ವಿಶೇಷ ದರ್ಶನದ ಟಿಕೆಟ್ ತೆಗೆದುಕೊಂಡು ದೇವಿ ದರ್ಶನಕ್ಕೆ ಬಂದವರು ಅಸಮಾಧಾನ ಹೊರಹಾಕಿದ್ದಾರೆ. ನಾವು ಯಾರಿಗೂ ಬಲವಂತ ಮಾಡಿಲ್ಲ. ಕೆಲವರಿಗೆ ಅನುಕೂಲವಾಗಲಿ ಎಂದು ಮಾಡಿದ್ದೇವೆ ಹೊರತು ಹಣ ಮಾಡಲು ಅಲ್ಲ ಎಂದರು. ಸಾವಿರ ರೂ ಕೊಟ್ಟು ಬಂದರೆ ಸರತಿ ಸಾಲು ಕಡಿಮೆ ಇರುತ್ತದೆ ಅಷ್ಟೇ. ಏನೇನೋ ನಿರೀಕ್ಷೆಗಳನ್ನು, ಭ್ರಮೆ ಇಟ್ಟುಕೊಂಡು ಬರಬೇಡಿ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆಗಳನ್ನು ಮಾಡಿದ್ದೇವೆ. ಎರಡರಿಂದ ಮೂರು ಪಟ್ಟು ಹೆಚ್ಚು ಭಕ್ತರು ಬಂದಿದ್ದಾರೆ. ಭಕ್ತರು ಸುರಕ್ಷತೆಯೇ ನಮ್ಮ ಗುರಿ. ಮುಂದಿನ ದಿನಗಳಲ್ಲಿ ಒಂದು ದಿನದಲ್ಲಿ ಐದು ಲಕ್ಷ ಮೀರಬಹುದು. ಆದರೂ ಎಲ್ಲ ಅಧಿಕಾರಿಗಳು ಶ್ರಮಿಸುತ್ತಿದ್ದೇವೆ. ಮೊದಲೇ ಮಾನಸಿಕವಾಗಿ ಸಿದ್ದರಾಗಿರಬೇಕು. ಎಷ್ಟು ಸಮಯಕ್ಕೆ ದರ್ಶನ ಆಗುತ್ತೆ ಎಂಬುದನ್ನು ಎಲ್ಲಾ ಸಾಲುಗಳಲ್ಲಿ ಈಗಾಗಲೇ ಬೋರ್ಡ್ ಹಾಕಿದ್ದೇವೆ. ಎಷ್ಟೊತ್ತಿಗೆ ದರ್ಶನ ಸಮಯ ಎಂದು ಬೋರ್ಡ್ ಕೂಡ ಹಾಕಿದ್ದೇವೆ ಎಂದರು.

ಧರ್ಮ ದರ್ಶನದ ಸಾಲಿನಲ್ಲಿ ಬರುತ್ತಿರುವವರಿಗೆ 7 ರಿಂದ 8 ಗಂಟೆ, 1000 ರೂ. ಸಾಲಿನಲ್ಲಿ ಬರುತ್ತಿರುವವರಿಗೆ 3 ರಿಂದ 4 ಗಂಟೆ, 300 ರೂ ಸಾಲಿನಲ್ಲಿ ಬರುತ್ತಿರುವವರಿಗೆ 6 ರಿಂದ 7 ಗಂಟೆ ಸಮಯ ಆಗುತ್ತಿದೆ ಎಂದು ವಿವರಿಸಿದರು.

ಇಂದು ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದಿದ್ದಾರೆ. ಇದು ಜಿಲ್ಲಾಡಳಿತಕ್ಕೆ ದೊಡ್ಡ ಸವಾಲಾಗಿದೆ. ನಿಮಗೆ ಸಿಗುವುದು ಕೆಲ ಸೆಕೆಂಡ್‌ಗಳು ಮಾತ್ರ. ಪೂರ್ವ ತಯಾರಿ ಮಾಡಿಕೊಂಡು ಬಂದು ಆಶೀರ್ವಾದ ಪಡೆಯಿರಿ.

ಮೊದಲು ತಾಳ್ಮೆ ಕಲಿಯಿರಿ, ಮೊಬೈಲ್ ಬಳಸಬೇಡಿ, ಮಕ್ಕಳನ್ನು ಮೇಲೆತ್ತಿಕೊಂಡು ಬನ್ನಿ, ತುಂಬಾ ಒತ್ತಡ ಇದೆ. ದ್ವಾರ ಬಾಗಿಲು ಬಂದ ವೇಳೆಯೇ ದೇವಿ ಕಡೆಗೆ ನೋಡಿ ಎಂದರು ಲತಾಕುಮಾರಿ ಹೇಳಿದರು.

### ಆದಾಯದಲ್ಲಿ ದಾಖಲೆ ಬರೆದ ದೇವಿ

ಹಾಸನಾಂಬ ಹಾಗೂ ಸಿದ್ದೇಶ್ವರಸ್ವಾಮಿ ಮಹೋತ್ಸವದಿಂದ ಕೋಟಿ-ಕೋಟಿ ಆದಾಯ ಹರದು ಬಂದಿದೆ. ಎಂಟು ದಿನದಲ್ಲಿ ದೇವಾಲಯಕ್ಕೆ 10.50 ಕೋಟಿ ಆದಾಯ



ಗಳಿಕೆಯಾಗಿದೆ. ಇಲ್ಲಿಯವರೆಗೆ ಸುಮಾರು 15 ಲಕ್ಷ ಭಕ್ತರಿಂದ ಹಾಸನಾಂಬೆಯ ದರ್ಶನ ಆಗಿದೆ. 1000, 300 ರೂ. ವಿಶೇಷ ದರ್ಶನದ ಟಿಕೆಟ್ ಮಾರಾಟ, ಲಾಡು ಪ್ರಸಾದ ಮಾರಾಟದಿಂದ 10.5 ಕೋಟಿ ಆದಾಯ ಗಳಿಕೆಯಾಗಿದೆ. ಇನ್ನು ನಾಲ್ಕು ದಿನ ಸಾರ್ವಜನಿಕ ದರ್ಶನಕ್ಕೆ ಅವಕಾಶ ಇದ್ದು, ಭಕ್ತರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

### ಗೌಡರ ಅಭಿಮಾನಿಯಿಂದ ಹರಕೆ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಆರೋಗ್ಯಕ್ಕೆ ಪ್ರಾರ್ಥಿಸಿ ಫೋಟೋ ಹಿಡಿದು



ಹಾಸನಾಂಬ ದೇವಿ ದರ್ಶನಕ್ಕೆ ಅಭಿಮಾನಿಯೊಬ್ಬರು ಬಂದಿದ್ದರು.

ಬೆಂಗಳೂರಿನ ಕೋರಮಂಗಲದ ಪಿ. ನಾಗರಾಜ್ ಎರಡು ಫೋಟೋಗಳನ್ನು ಹಿಡಿದು ಬಂದಿದ್ದರು. ಮುಂದಿನ ಬಾರಿ ಕುಮಾರಸ್ವಾಮಿ ಐದು ವರ್ಷ ಸಿಎಂ ಆಗಲಿ ಎಂದು ಹರಕೆ ಹೊತ್ತು ಬಂದಿರುವುದಾಗಿ ಹೇಳಿದರು. ಪಿ.ನಾಗರಾಜ್ ಈಜಿಪುರ ವಾರ್ಡ್‌ನಲ್ಲಿರುವ ಅಯ್ಯಪ್ಪಸ್ವಾಮಿ ದೇವಾಲಯದ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಹೆಚ್‌ಡಿಕೆಗೆ ಸನ್ಮಾನಿಸದ ಜಿಲ್ಲಾಡಳಿತ

ಹಾಸನಾಂಬ ದರ್ಶನಕ್ಕೆ ಬಂದಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಶಿಷ್ಟಾಚಾರ ಪ್ರಕಾರ ಜಿಲ್ಲಾಡಳಿತ ಗೌರವಿಸಲಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಕೇಂದ್ರ ಸಚಿವರನ್ನು ಸೌಜನ್ಯಕ್ಕೂ ಜಿಲ್ಲಾಡಳಿತ ಗೌರವಿಸಲಿಲ್ಲ. ದರ್ಶನದ ನಂತರ ಸಾಮಾನ್ಯವಾಗಿ ಗಣ್ಯರನ್ನು ಗೌರವಿಸಲಾಗುತ್ತಿದೆ. ಹಾಗೆಯೇ ಕುಮಾರಸ್ವಾಮಿ ಅವರನ್ನೂ ಗೌರವಿಸುವಂತೆ ಮೈಕ್ ಮೂಲಕ ಕೇಳಿದರೂ, ಜಿಲ್ಲಾಧಿಕಾರಿ ಮತ್ತು ಅಧಿಕಾರಿಗಳು ಯಾರೂ ಬರಲಿಲ್ಲ. ಶ್ರವಣಬೆಳಗೊಳ ಶಾಸಕ ಸಿ.ಎನ್.ಬಾಲಕೃಷ್ಣ ಕರೆದರೂ ಯಾರೊಬ್ಬರೂ ಬರಲಿಲ್ಲ.ಕೊನೆಗೆ ದರ್ಶನದ ಬಗ್ಗೆ ಮಾತನಾಡಿ ಸಚಿವರು ಹೊರಟರು.

### ಮಳೆಯಲ್ಲೂ ನಿಂತ ಸಂಸದ

ಒಂದೆಡೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರ ಜಮಾವಣೆ, ಮತ್ತೊಂದೆಡೆ ಧೋ ಎಂದು ಸುರಿಯುತ್ತಿರುವ ಮಳೆ. ಇದು ಹಾಸನಾಂಬ ದರ್ಶನೋತ್ಸವದಲ್ಲಿ ಕಂಡುಬಂದ ದೃಶ್ಯ. ಧರ್ಮದರ್ಶನ ಸಾಲಿನಲ್ಲಿ ನಿಂತವರು ಮಳೆಯಲ್ಲೇ ನೆನೆದರು. ಅಲ್ಲಿಯೇ ಇದ್ದ ಸಂಸದ ಶ್ರೇಯಸ್ ಪಟೇಲ್ ಅವರು ಯಾವ ಸಮಸ್ಯೆಯೂ ಆಗದಂತೆ ನೋಡಿಕೊಂಡರು.

# ವಾಷಿಂಗ್ ಮಷಿನ್ ಖರೀದಿಸುವುದು ಅಭಿವೃದ್ಧಿಯೇ

## ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಪ್ರಶ್ನೆ : ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗೃಹಲಕ್ಷ್ಮಿ ಹಣ ಸಂಗ್ರಹಿಸಿ ಟೈಲರಿಂಗ್ ಮಷಿನ್, ಫ್ರಿಡ್ಜ್, ವಾಷಿಂಗ್ ಮಷಿನ್ ಖರೀದಿಸುವುದು ಸರ್ವತೋಮುಖ ಅಭಿವೃದ್ಧಿಯೇ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರು.

ಶುಕ್ರವಾರ ಶಾಸಕ ಹೆಚ್.ಪಿ. ಸ್ವರೂಪ್ ಅವರ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನಾನು ಯಾವತ್ತೂ ಟೀಕಿಸಿಲ್ಲ. ಎಷ್ಟೇ ಅಸಮರ್ಥ ಸರ್ಕಾರ ಅಧಿಕಾರಕ್ಕೆ ಬಂದರೂ ಖಜಾನೆ ತುಂಬಿಸಲು ರಾಜ್ಯದ ಜನರು ಸಮರ್ಥರಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಸರ್ವತೋಮುಖ ಅಭಿವೃದ್ಧಿಯಾಗುತ್ತದೆಂಬುದನ್ನು ನಂಬಲು ಸಾಧ್ಯವಿಲ್ಲ. ಮಹಿಳೆಯರು ಗೃಹಲಕ್ಷ್ಮೀ ಹಣ ಸಂಗ್ರಹಿಸಿ ವಾಷಿಂಗ್ ಮಷಿನ್, ಟೈಲರಿಂಗ್ ಮಷಿನ್, ರೆಫ್ರಿಜರೇಟರ್ ಖರೀದಿಸುವುದು ಅಭಿವೃದ್ಧಿಯೇ. ತೆರಿಗೆ ಹೆಸರಿನಲ್ಲಿ ಜನರನ್ನು ವಂಚಿಸುತ್ತಿರುವುದು ಸರಿಯೇ. ಖಜಾನೆ ತುಂಬಿಸಿಕೊಳ್ಳಲು ಮದ್ಯ ಮಾರಾಟ ಪ್ರಮಾಣ ಹೆಚ್ಚಳ ಮಾಡುವುದು ಆಡಳಿತದ ಲಕ್ಷಣವೇ ಎಂದು ತರಾಟೆಗೆ ತೆಗೆದುಕೊಂಡರು.

### ಅರಸು ಆಗಲು ಸಾಧ್ಯವಿಲ್ಲ

ಮುಖ್ಯಮಂತ್ರಿಯಾಗಿ ದೇವರಾಜ ಅರಸು ಅವರ ಕಾಲಾವಧಿ ಮುಗಿಸಿದ ಮಾತ್ರಕ್ಕೆ ಅವರಂತೆ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುವುದಿಲ್ಲ, ಇರುವಷ್ಟು ದಿನ ಏನು ಕೆಲಸ ಮಾಡಿದ್ದೀರಿ ಎಂಬುದು ಮುಖ್ಯ. ನಾಡಿನ ಜನರಿಗಾಗಿ ಶಾಶ್ವತ ಕೆಲಸಗಳನ್ನು ಏನು ಮಾಡಿದ್ದೀರಿ ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಸರ್ಕಾರದಿಂದ ಯಾವ ಅಭಿವೃದ್ಧಿ ಕೆಲಸಗಳೂ ಆಗುತ್ತಿಲ್ಲ. ಎಲ್ಲರೂ ಆಕಾಶದಲ್ಲೇ ಹಾರಾಡುತ್ತಿದ್ದಿರಿ. ನೆಲಕ್ಕೆ ಇಳಿದು ಸ್ವಲ್ಪ ಜನರ ಸಮಸ್ಯೆಗೆ ಕಿವಿಯಾಗಿ. ನಿಮ್ಮ ಎಷ್ಟು ಶಾಸಕರು ಜನರ ಸಮಸ್ಯೆ ಕೇಳಿದ್ದಾರೆಂದು ಪ್ರಶ್ನಿಸಿದರು.

ಹಲವು ತಿಂಗಳಿಂದ ನಾನು ಅನಾರೋಗ್ಯದಿಂದ ಬೇರೆ ಸಮಸ್ಯೆ ಎದುರಿಸುತ್ತಿದ್ದೆ. ನಮ್ಮ ಪಕ್ಷದ ಬಗ್ಗೆ ಅನುಮಾನ ಇದ್ದವರು, ಪಕ್ಷವನ್ನು ಸರ್ವನಾಶ ಮಾಡಬೇಕೆಂದು ಅಂದುಕೊಂಡಿದ್ದವರಿಗೆ ಈಗ ಉತ್ತರ ಸಿಕ್ಕಿದೆ. ಗುರುವಾರ ಮಂಡ್ಯದಲ್ಲಿ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ್ದೇನೆ. ದೀಪಾವಳಿ ಬಳಿಕ ರಾಜ್ಯಾದ್ಯಂತ ಸುತ್ತಾಟ ನಡೆಸುತ್ತೇನೆ. ಜನಮಾನಸದಿಂದ ನಾನು ದೂರ ಸರಿಯುವ ಪ್ರಶ್ನೆಯೇ ಇಲ್ಲವೆಂದರು.

### ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು



ಸ್ವಾತಂತ್ರ್ಯ ಪೂರ್ವದಲ್ಲೂ ಭ್ರಷ್ಟಾಚಾರವಿತ್ತು. ಈಗಲೂ ಅದು ವಿವಿಧ ಸ್ವರೂಪಗಳಲ್ಲಿ ಚಲಾವಣೆಯಲ್ಲಿದೆ. ಹಿಂದಿನ ಬಿಜೆಪಿ ಸರ್ಕಾರವನ್ನು ಶೇ. 40 ಕಮಿಷನ್ ಸರ್ಕಾರವೆಂದು ಹೀಗಳೆದಿದ್ದಿರಿ. ಪ್ರಕರಣ ತನಿಖೆಗೆ ವಿಶೇಷ ತಂಡವನ್ನು ರಚಿಸಿದ್ದಿರಿ. ಅದರಿಂದ ಯಾವ ಪ್ರಯೋಜನವು ಆಗಲಿಲ್ಲ. ಅಂದು ಬಿಜೆಪಿ ವಿರುದ್ಧ ಕಮಿಷನ್ ಆರೋಪ ಮಾಡಿದ್ದ ಗುತ್ತಿಗೆದಾರರು ಇಂದು ಕಾಂಗ್ರೆಸ್ ವಿರುದ್ಧ ಮುಗಿಬಿದ್ದಿದ್ದಾರೆ. ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು ಎಂಬು ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಭ್ರಷ್ಟ ಸರ್ಕಾರವನ್ನು ನಾನು ಎಂದಿಗೂ ನೋಡಿಲ್ಲವೆಂದು ದೂರಿದರು.

### ದೀಪಾವಳಿ ಕೊಡುಗೆ ಹೆಸರಲ್ಲಿ ಜೇಬಿಗೆ ಕೈ ಹಾಕಿದ ಸರ್ಕಾರ

ರಾಜ್ಯದಲ್ಲಿ ಮತಗಳ್ಳತನ ನಡೆದಿದೆಯೆಂದು ಆರೋಪಿಸುವ ಕಾಂಗ್ರೆಸ್ ರಾಜ್ಯದಲ್ಲಿ 136 ಸೀಟು ಗೆಲ್ಲಲು ಹೇಗೆ ಸಾಧ್ಯವಾಯಿತು. ಈ ಬಗ್ಗೆ ಆರೋಪಿಸುತ್ತಿರುವ ಆಳಂದ ಶಾಸಕರು ಕಳ್ಳತನದ ಓಟಿನಿಂದಲೇ ಗೆದ್ದಿದ್ದಾರಾ ಎಂಬುದನ್ನು ಹೇಳಬೇಕು. ಕಾಂಗ್ರೆಸ್‌ನವರೇ ದೊಡ್ಡ ದರೋಡೆಕೋರರು. ಇಷ್ಟು ವರ್ಷಗಳಿಂದ ಕಳ್ಳತನದಿಂದಲೇ ಗೆದ್ದಿದ್ದಾರೆ. ಅವರಿಗೆ ಜನರ ಒಳಿತು ಬೇಕಿಲ್ಲ, ಕೇವಲ ಪ್ರಚಾರದಲ್ಲಿರಬೇಕೆಂದು ಈ ರೀತಿಯ ವಾದ ಮಾಡುತ್ತಾರೆಂದು ಆಕ್ರೋಶ ವ್ಯಕ್ತಪಡಿಸಿದರು. ದೀಪಾವಳಿ ಕೊಡುಗೆ ಹೆಸರಿನಲ್ಲಿ ರಾಜ್ಯ ಸರ್ಕಾರ ಬೆಂಗಳೂರು ಜನರ ಜೇಬಿಗೆ ಕೈ ಹಾಕಿದೆ. ಕಂದಾಯ ಆಸ್ತಿಯನ್ನು ಬಿ ಖಾತಾದಿಂದ ಎ ಖಾತೆಗೆ ಪರಿವರ್ತನೆ ಮಾಡುವ ಅರ್ಜಿಗೆ 500 ರೂ. ಶುಲ್ಕದ ಹೆಸರಿನಲ್ಲಿ ನೂರಾರು ಕೋಟಿ ರೂ. ಕೊಳ್ಳೆ ಹೊಡೆಯಲಾಗುತ್ತಿದೆ. ಇಷ್ಟು ವರ್ಷಗಳಿಂದ ಅದೇ ಆಸ್ತಿ ಅನುಭವಿಸುತ್ತಿರುವ ಜನರಿಗೆ ಖಾತಾ ಪರಿವರ್ತಿಸಿಕೊಡುವುದರ ಉದ್ದೇಶವೇನು. ಲೂಟಿ ಹೊಡೆಯಲು ಇಂತಹ ತಂತ್ರ ಹೆಣೆಯುತ್ತಾರೆ. ಈ ಬಗ್ಗೆ ಸಚಿವ ಜಿ. ಪರಮೇಶ್ವರ್ ಅವರಿಗೆ ಗೊತ್ತಿಲ್ಲವೇ. ಅವರಿಗೆ ಯಾರಾದರೂ ಮಂತ್ರಿ ಅಂತಾರಾ. ಸಣ್ಣ ಮಕ್ಕಳಿಗೆ ಗೊತ್ತಾಗುವ ವಿಚಾರ ಅವರಿಗೆ ತಿಳಿಯುವುದಿಲ್ಲವೆಂದರೆ ನಾನೇನು ಮಾಡಲಿ ಎಂದು ಕಾಲೆಳೆದರು.

### ಅಸೂಯೆ ಪಡುವ ವ್ಯಕ್ತಿ ನಾನಲ್ಲ: ಹೆಚ್‌ಡಿಕೆ


ಬೆಂಗಳೂರು ನಗರವನ್ನು ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಮಾಡಿ ಅಭಿವೃದ್ಧಿಪಡಿಸುತ್ತಿರುವುದು ಸಹಿಸದೆ ನಾನು ಅಸೂಯೆಪಡುತ್ತಿದ್ದೇನೆಂದು ಉಪಮುಖ್ಯಮಂತ್ರಿ ಹೇಳಿದ್ದಾರೆ. ಸುರಂಗ, ಹೊರವರ್ತುಲ ರಸ್ತೆಗೆ 2006-07ರಲ್ಲಿ ನಾವೇ ಯೋಜನೆ ರೂಪಿಸಿದ್ದೆವು. 16 ವರ್ಷಗಳ ಹಿಂದೆಯೇ ಘೋಷಣೆ ಮಾಡಿದ್ದ ಯೋಜನೆಗಳನ್ನು ಈಗ ರಿಮೇಕ್ ಮಾಡುತ್ತಿದ್ದಿರಿ. ಅಭಿವೃದ್ಧಿ ಕಾಮಗಾರಿಗೆ ಅಸೂಯೆಪಡುವ ಬುದ್ದಿ ನನಗಿಲ್ಲವೆಂದು ಡಿ.ಕೆ.ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿದರು.

ಶಿವಕುಮಾರ್ ಹಾಸನಾಂಬ ಸನ್ನಿಧಿಯಲ್ಲಿ ಖಡ್ಗಮಾಲಾ ಪೂಜೆ ಮಾಡಿಸಿದ್ದಾರೆ. ನಾವು ದೈವಭಕ್ತರೇ. ಆದರೆ ಇವರ ಹಾಗೆ ಯಾವತ್ತೂ ಮಾಡಿಲ್ಲ. ಪದ ಬಳಕೆಯಲ್ಲಿ ಶುದ್ಧತೆ ಇಲ್ಲದಿದ್ದರೆ ಯಾವ ಪೂಜೆ ಮಾಡಿದರೇನು ಫಲ. ರಾಜ್ಯದ ಜನರು ನಿಮ್ಮನ್ನು ಉಪಮುಖ್ಯಮಂತ್ರಿ ಮಾಡಿದ್ದಾರೆ. ಚುನಾವಣೆಗೂ ಮೊದಲು ನೀಡಿದ್ದ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ. ಪ್ರತಿದಿನ ಸುಳ್ಳು ಹೇಳುವುದನ್ನು ಬಿಟ್ಟರೆ ಬೇರೆ ಏನೂ ಮಾಡುತ್ತಿಲ್ಲ. ಅಧಿಕಾರಕ್ಕೆ ಬಂದ ದಿನದಿಂದಲೂ ಮುಖ್ಯಮಂತ್ರಿ ಬದಲಾವಣೆಯದ್ದೇ ಚರ್ಚೆಯಾಗುತ್ತಿದೆ. ಅಧಿಕಾರ ಯಾರಪ್ಪನ ಆಸ್ತಿಯಲ್ಲ. ಯಾರನ್ನು ಆಯ್ಕೆ ಮಾಡಬೇಕೆಂಬುದನ್ನು ಜನರು ನಿರ್ಧರಿಸುತ್ತಾರೆ. ಜನರ ಆಶೀರ್ವಾದ ಪಡೆದಿರುವ ನೀವು ಮಾಡಬೇಕಿರುವ ಕೆಲಸಗಳತ್ತ ಗಮನ ಹರಿಸಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸಾರ್ವಕಾಲಿಕವಾಗಿ ಬ್ಯಾನ್ ಮಾಡುವುದು ಸಾಧ್ಯವಿಲ್ಲ. ಇಂತಹ ವಿಷಯಗಳಿಗೆ ಯಾಕೆ ಪ್ರಾಮುಖ್ಯತೆ ಕೊಡುತ್ತಿದ್ದಾರೆಂಬುದೇ ಅರ್ಥವಾಗುತ್ತಿಲ್ಲ. ಈ ಸರ್ಕಾರಕ್ಕೆ ಅಭಿವೃದ್ಧಿಗಿಂತ ಬೇಡದ ವಿಚಾರಗಳೇ ಮುಖ್ಯವಾಗಿದೆ. ನಾಥೂರಾವ್ ಗೋಡ್ಸೆ ಮಹಾತ್ಮ ಗಾಂಧೀಜಿ ಅವರನ್ನು ಹತ್ಯೆಗೈದ ಸಂದರ್ಭದಲ್ಲಿ ಆರ್‌ಎಸ್‌ಎಸ್ ಅನ್ನು ನಿಷೇಧಿಸಲಾಗಿತ್ತು. ಜವಾಹರಲಾಲ್ ನೆಹರೂ ನಿಷೇಧ ಆದೇಶ ವಾಪಾಸ್ ಪಡೆಯಲಿಲ್ಲವೇ. ನೆಹರುಗೆ ಅಸಾಧ್ಯವಾದದ್ದು ಸಿದ್ದರಾಮಯ್ಯ-ಪ್ರಿಯಾಂಕ್ ಖರ್ಗೆ ಅವರಿಂದ ಸಾಧ್ಯವೇ ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ನಡೆಯುತ್ತಿರುವುದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲ. ಅದು ಸಿದ್ದರಾಮಯ್ಯ ಗಣತಿ. ನನಗೆ ನವೆಂಬರ್ ಕ್ರಾಂತಿ ಬಗ್ಗೆ ಏನೂ ಗೊತ್ತಿಲ್ಲವೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜೆಡಿಎಸ್ ಶಾಸಕರಾದ ಎ.ಮಂಜು, ಸುರೇಶ್‌ಬಾಬು, ಹರೀಶ್‌ಗೌಡ, ಶರಣಪ್ರಕಾಶ್ ಕುಂದಕೂರು, ಹೆಚ್.ಪಿ. ಸ್ವರೂಪ್, ರಾಜು, ವಿಧಾನ ಪರಿಷತ್ ಸದಸ್ಯ ಬೋಜೇಗೌಡ, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮುಖಂಡ ಎನ್.ಆರ್. ಸಂತೋಷ್ ಹಾಗೂ ಇತರರಿದ್ದರು.

# ಯಳವಾರೆ ಪಿಎಸಿಎಸ್‌ಗೆ ಹೇಮಲಿಂಗೇಗೌಡ ಅಧ್ಯಕ್ಷ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ತಾಲ್ಲೂಕಿನ ಯಳವಾರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹೇಮಲಿಂಗೇಗೌಡ ಹಾಗೂ ಉಪಾಧ್ಯಕ್ಷರಾಗಿ ಗೀಜಿಹಳ್ಳಿ ಇಂದ್ರಮ್ಮ ಅವಿರೋಧ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಹೇಮಲಿಂಗೇಗೌಡ ಮಾತನಾಡಿ, ಸಹಕಾರ ಸಂಘದ ಅಧ್ಯಕ್ಷನಾಗಿ ಆಯ್ಕೆಯಾಗಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ. ಜಿಲ್ಲಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ರಾಂಪುರ ಶೇಖರಪ್ಪ ಹಾಗು ಜೆಡಿಎಸ್ ಮುಖಂಡ ಹೊಸೂರು ಗಂಗಣ್ಣ, ಎಲ್ಲಾ ನಿರ್ದೇಶಕರು ನನ್ನ ಆಯ್ಕೆಗೆ ಸಹಕರಿಸಿದ್ದಾರೆ. ಎಲ್ಲರ ಸಲಹೆ, ಸಹಕಾರದಿಂದ ಷೇರುದಾರ ರೈತರಿಗೆ ಒಳಿತಾಗುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ಅಣ್ಣನಾಯಕನಹಳ್ಳಿ ಶಿವಣ್ಣ ಇತರರು ಹಾಜರಿದ್ದರು.

# ಪತ್ರಕರ್ತ ರಮೇಶ್ ಹಂಡ್ರಂಗಿ ನಿಧನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಪತ್ರಕರ್ತ ರಮೇಶ್ ಹಂಡ್ರಂಗಿ (35) ಶುಕ್ರವಾರ ನಿಧನರಾಗಿದ್ದಾರೆ.

ಬೆಂಗಳೂರು ಹಾಗೂ ಹಾಸನದ ಸುದ್ದಿ ವಾಹಿನಿ, ದಿನಪತ್ರಿಕೆಯಲ್ಲಿ ಕೆಲಸ ಮಾಡಿದ್ದ ಅವರು ಕಳೆದ ಎರಡು ತಿಂಗಳಿಂದ ಸಂಯುಕ್ತ ಕರ್ನಾಟಕ ಜಿಲ್ಲಾ ವರದಿಗಾರಾಗಿ ನೇಮಕಗೊಂಡಿದ್ದರು. ನಗರದ ವಿಶ್ವೇಶ್ವರಯ್ಯ ಬಡಾವಣೆಯ ಸಹೋದರಿಯ ಮನೆಯಲ್ಲಿ ನೆಲೆಸಿದ್ದರು. ಸಹೋದರಿ ಹೇಮಾ ಗುರುವಾರ ಸಂಬಂಧಿಕರ ತಿಥಿ ಕಾರ್ಯಕ್ಕೆ ತೆರಳಿದ್ದರು. ಶುಕ್ರವಾರ ಸಂಜೆ ಮನೆಗೆ ಬಂದು ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಬಡಾವಣೆ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಅರಕಲಗೂಡಿನ ಹಂಡ್ರಂಗಿಯಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಲಿದೆ.

# ಸರ್ಕಾರಗಳ ಅವೈಜ್ಞಾನಿಕ ನೀತಿಯಿಂದ ರೈತರಿಗೆ ತೊಂದರೆ

## ಹಾಸನದಲ್ಲಿ ಸಿಐಟಿಯು 16ನೇ ಸಮ್ಮೇಳನ | ತೆಂಗು ಬೆಳೆ ಪರಿಹಾರ ವಿಚಾರ ಸಂಕಿರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸರ್ಕಾರ ರೂಪಿಸುವ ನೀತಿಗಳು ಸಮರ್ಪಕವಾಗಿ ಇಲ್ಲದೆ ಇರುವುದರಿಂದ ಕೊಬ್ಬರಿ ಬೆಲೆಯಲ್ಲಿ ಏರಿಳಿತ ಕಾಣುತ್ತಿದ್ದೇವೆ ಎಂದು ಬೆಲೆ ಕಾವಲು ಸಮಿತಿ ರಾಜ್ಯ ಕಾರ್ಯದರ್ಶಿ ಶ್ರೀಕಾಂತ್ ಕೆಳಹಟ್ಟಿ ಹೇಳಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನವೆಂಬರ್ ನಲ್ಲಿ ಆಯೋಜಿಸಿರುವ ಸಿಐಟಿಯು 16ನೇ ರಾಜ್ಯ ಸಮ್ಮೇಳನದ ಅಂಗವಾಗಿ ಸಿಐಟಿಯು ಆಯೋಜಿಸಿದ್ದ ತೆಂಗು ಬೆಳೆಗಾರರ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ದೇಶದ ಯಾವುದೇ ಬೆಳೆಯಲ್ಲೂ ಕೂಡ ಕೊಬ್ಬರಿ ಬೆಲೆಯ ಏರಳಿತದಂತೆ ಏರುಪೇರು ಆಗುವುದನ್ನು ನಾವು ಕಾಣುತ್ತಿಲ್ಲ. ಕೊಬ್ಬರಿ ಬೆಳೆಗಾರರು ಕೂಡ ಕೊಬ್ಬರಿಯನ್ನು ಕೊಬ್ಬರಿಯಿಂದ ಬರುವಂತಹ ಎಣ್ಣೆ ಉಪ ಉತ್ಪನ್ನಗಳನ್ನು ಬಳಸುತ್ತಿಲ್ಲ. ಕೊಬ್ಬರಿಯನ್ನು ಉಪಯೋಗಿಸುವ ಕ್ರಮವನ್ನೇ ಬೆಳಗಾರರೂ ತಿಳಿದುಕೊಂಡಿಲ್ಲ ಬೇರೆಯವರಿಗೂ ತಿಳಿಸುತ್ತಿಲ್ಲ.

ತುಮಕೂರು, ಹಾಸನ, ಮಂಡ್ಯ ಜಿಲ್ಲೆ ಸೇರಿ 17 ಜಿಲ್ಲೆಗಳಲ್ಲಿ



ತೆಂಗು ಬೆಳೆಯಲಾಗುತ್ತಿದೆ. 10-12 ಮಾರುಕಟ್ಟೆಗಳಲ್ಲಿ ಹರಾಜು ಪ್ರಕ್ರಿಯೆ ನಡೆಯುತ್ತದೆ. ಕೊಬ್ಬರಿ ಮತ್ತು ತೆಂಗು ಬೆಳೆಯ ಖರೀದಿಯ ಮಾನದಂಡ ಬದಲಾಗಬೇಕು. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಮತ್ತು ತೆಂಗಿನ ಕಾಯಿಯನ್ನು ವರ್ಷಪೂರ್ತಿ ಖರೀದಿಸುಂತಾಗಬೇಕು.ಮಾರುಕಟ್ಟೆಯ ಹರಾಜು ಪ್ರಕ್ರಿಯೆ, ಮಾರುಕಟ್ಟೆಯ ಕೌಶಲದ ಬಗ್ಗೆ ರೈತರಿಗೆ ಅರಿವು ಇರಬೇಕು ಎಂದರು.

ತೆಂಗು ಬೆಳೆ ಜತೆ ಅಂತರ ಬೆಳೆಗಳನ್ನು ಬೆಳೆಯುವುದರಿಂದ ರೈತಾಪಿ ವರ್ಗದವರ ಆದಾಯ ಹೆಚ್ಚಾಗುತ್ತದೆ. ತೆಂಗಿನ ಜೊತೆ ಜೇನು ಸಾಕಾಣಿಕೆ, ನೀರಾ ಉತ್ಪಾದನೆ ಮಾಡಬೇಕು. ಕೊಬ್ಬರಿ ಮತ್ತು ತೆಂಗು ಉತ್ಪನ್ನದ ಆಹಾರ ಮೇಳ ಆಯೋಜಿಸಬೇಕು. ಆಹಾರ ಉತ್ಪನ್ನಗಳನ್ನು ಮಾರಾಟ ಮಾಡಬೇಕು ಎಂದು ಹೇಳಿದರು.

ಕೆಎಂಎಫ್ ಮಾದರಿಯಲ್ಲಿ ಸಹಕಾರಿ ಸಂಘಗಳನ್ನು ರೂಪಿಸಿಕೊಂಡು ಅದರ ಮೂಲಕ ಕೊಬ್ಬರಿ ಖರೀದಿಯನ್ನು ನಿರಂತರವಾಗಿ ಮಾಡುವಂತಾಗಬೇಕು. ಸರ್ಕಾರ ಕೂಡ ಗುಣಮಟ್ಟದ ಮಾನದಂಡ ನಿಗದಿಪಡಿಸಬೇಕು. ವರ್ಷಪೂರ್ತಿ ಕಾಯಿಯಿಂದ ಕೊಬ್ಬರಿ ಮಾಡುತ್ತಿರುವುದಕ್ಕೂ 15 ದಿನದಲ್ಲಿ ಹೋಳಿನ ಮೂಲಕ ಕೊಬ್ಬರಿ ಮಾಡುತ್ತಿರುವುದಕ್ಕೂ ವ್ಯತ್ಯಾಸವನ್ನು ಗುರುತಿಸದಂತಾಗಿದೆ ಎಂದರು.

ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ಚೈತನ್ಯಕುಮಾರ್ ಮಾತನಾಡಿ, ಗುಣಮಟ್ಟದ ತೆಂಗಿನ ಸಸಿ ತಳಿ ನಾಟಿ ಮಾಡಬೇಕು. ಬೆಳೆಗಾರರಿಗೆ ಸರ್ಕಾರದಿಂದ ಸಾಲ ಸೌಲಭ್ಯ ದೊರಕುವಂತಾಗಬೇಕು. ತೆಂಗು ಇಳುವರಿ ಹೆಚ್ಚಿಸುವ ತಂತ್ರಜ್ಞಾನ ಮತ್ತು ಕೌಶಲ ಕುರಿತು ತಿಳವಳಿಕೆ ನೀಡಬೇಕು. ತೆಂಗು ಬೆಳೆಯುವಲ್ಲಿ ಕೇರಳ ರಾಜ್ಯ ಪ್ರಥಮ ಸ್ಥಾನದಲ್ಲಿದ್ದರೆ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದು ಹೇಳಿದರು.

ತೆಂಗು ಬೆಳೆಗಾರರ ಹೋರಾಟ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ರಾಮಚಂದ್ರ ಮಾತನಾಡಿ, ರೈತರ ಪಾಲಿಗೆ ಕಲ್ಪವೃಕ್ಷವಾದ ತೆಂಗು ಬೆಳೆಯನ್ನು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 50 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಗರಿ ರೋಗ, ಕಾಂಡಕೊರಕ, ಕಪ್ಪುತಲೆ ರೋಗದಿಂದ ಶೇ. 50 ರಷ್ಟು ಇಳುವರಿ ಕುಂಠಿತವಾಗಿದೆ ಎಂದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಮೋಹನ್ ಕುಮಾರ್ ಮಾತನಾಡಿ, ರೈತರು ತೆಂಗಿನಿಂದ ಬರುವ ಕಾಯಿ ಮಟ್ಟೆ ಕುರಂಬಳೆ ಗುದುಮಟ್ಟೆ ಇನ್ನಿತರೆ ತ್ಯಾಜ್ಯಗಳನ್ನ ಗೊಬ್ಬರವಾಗಿ ಉಪಯೋಗಿಸಿಕೊಳ್ಳಬೇಕು. ಸಾವಯವ ಕೃಷಿಯನ್ನ ರೂಡಿಸಿಕೊಳ್ಳಬೇಕು. ತೆಂಗಿನ ಗರಿ ಹಾಗು ತ್ಯಾಜ್ಯಗಳಿಗೆ ರೈತರು ಬೆಂಕಿ ಹಾಕುವುದನ್ನು ನಿಲ್ಲಿಸಬೇಕು ಎಂದು ಸಲಹೆ ನೀಡಿದರು.

ತೋಟಗಾರಿಕೆ ಇಲಾಖೆ ಅಧಿಕಾರಿ ಕಿರಣ್, ಸಿಐಟಿಯು ಉಪಾಧ್ಯಕ್ಷ ಎಚ್. ಎಸ್. ಮಂಜುನಾಥ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಎಚ್.ಆರ್. ನವೀನ್‌ಕುಮಾರ್ ಮಾತನಾಡಿದರು.

ವಿಚಾರ ಸಂಕಿರಣದ ಸಿದ್ಧತಾ ಸಮಿತಿಯ ಗೌರವಾಧ್ಯಕ್ಷ ಸಿ.ಆರ್. ಶಂಕರ್, ಪ್ರಧಾನ ಕಾರ್ಯದರ್ಶಿ ಜೆ.ಎನ್. ಚಂದ್ರಹಾಸ, ನಿವೃತ್ತ ಪ್ರಾಂಶುಪಾಲ ಮೇಟಿಕೆರೆ ಹಿರಿಯಣ್ಣ, ರೈತ ಸಂಘದ ಮುಖಂಡರಾದ ಸುಜಾತಾ, ತಾಲ್ಲೂಕು ಗ್ರಾಮ ಪಂಚಾಯಿತಿ ನೌಕರ ಸಂಘದ ಅಧ್ಯಕ್ಷ ಕರಿಯಪ್ಪ ಭಾಗವಹಿಸಿದ್ದರು.

# ಟಿಎಪಿಸಿಎಂಎಸ್ ಚುನಾವಣೆ ಜೆಡಿಎಸ್‌ನ 6 ನಿರ್ದೇಶಕರು ಆಯ್ಕೆ

ಚನ್ನರಾಯಪಟ್ಟಣ: ತಾಲ್ಲೂಕು ಟಿಎಪಿಸಿಎಂಎಸ್‌ಗೆ ಅ. 19ರಂದು ಚುನಾವಣೆ ನಿಗದಿಯಾಗಿದ್ದು, ಎ-ತರಗತಿಯಿಂದ ಜೆಡಿಎಸ್ ಬೆಂಬಲಿತ 6 ನಿರ್ದೇಶಕರು ಅವಿರೋಧ ಆಯ್ಕೆಯಾಗಿದ್ದಾರೆ.

5 ವರ್ಷಗಳ ಅವಧಿಗೆ ತಾಲ್ಲೂಕು ವ್ಯವಸ್ಯಾಯೋತ್ಪನ್ನ ಮಾರಾಟ ಸಹಕಾರ ಮಹಾಮಂಡಳಕ್ಕೆ ಚುನಾವಣೆ ನಿಗದಿಯಾಗಿ ಅದಕ್ಕಾಗಿ 14 ಸ್ಥಾನಗಳಿಗೆ ನಿರ್ದೇಶಕರ ಆಯ್ಕೆ ಪ್ರಕ್ರಿಯೆಯನ್ನು ಚುನಾವಣೆ ಮೂಲಕ ನಡೆಸಬೇಕಾಗಿದೆ. ಎ ಮತ್ತು ಬಿ ತರಗತಿ ವಿಭಾಗಗಳಲ್ಲಿ ನಡೆಯುವ ಚುನಾವಣೆಯಲ್ಲಿ ಎ ತರಗತಿಯಡಿ 6 ಮಂದಿ ಮತ್ತು ಬಿ ತರಗತಿಯಡಿ 8ಮಂದಿ ನಿದೇಶಕರಾಗಿ ಆಯ್ಕೆಯಾಗುತ್ತಾರೆ. ಎ ತರಗತಿಯಡಿ ಎಲ್ಲಾ 6 ಸ್ಥಾನಗಳು ಅವಿರೋಧ ಆಯ್ಕೆಯಾಗಿದ್ದು, ಎಲ್ಲಾ 6 ಸ್ಥಾನಗಳು ಜೆಡಿಎಸ್ ಪಾಲಾಗಿವೆ. ಎ ತರಗತಿಯಡಿ ಅರ್ಹತೆ ಹೊಂದಿರುವ ತಾಲ್ಲೂಕಿನ 40 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಡಿ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್. ಪುಟ್ಟಸ್ವಾಮಿಗೌಡ, ವಕೀಲ ಬಿ.ಎನ್ .ಬೋರೆಗೌಡ, ಪರಮ ಕೃಷ್ಣೇಗೌಡ, ಹೆಚ್.ಆರ್. ವೆಂಕಟೇಶ್‌ಮೂರ್ತಿ, ತೋಟಿ ನಾಗರಾಜ್, ನೆಟ್ಟೆಕೆರೆ ನಾಗರಾಜ್ ಅವರು ಅವಿರೋಧ ಆಯ್ಕೆಯಾಗಿದ್ದಾರೆ.



ಇನ್ನೂ ಬಿ ತರಗತಿಯಡಿಯ 8 ಸ್ಥಾನ ಪೈಕಿ ಎಸ್‌ಟಿ ಮೀಸಲು ಕ್ಷೇತ್ರದ ಜೆಡಿಎಸ್ ಬೆಂಬಲಿತ ಉಮೇಶ್ ಅವಿರೋಧ ಆಯ್ಕೆಯಾಗಿದ್ದಾರೆ. ಇನ್ನುಳಿದಂತೆ 7 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, 16 ಮಂದಿ ಕಣದಲ್ಲಿದ್ದಾರೆ. 3559 ಷೇರುದಾರ ರೈತರು ಮತದಾನದ ಮೂಲಕ ನಿದೇಶಕರು ಆಯ್ಕೆ ಮಾಡಲಿದ್ದಾರೆ.

ಎ.ಚೋಳೇನಹಳ್ಳಿ ಪಿಎಸಿಸಿಎಸ್ ನಿಂದ ಅವಿರೋಧ ಆಯ್ಕೆಯಗಿರುವ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ ಮಾತನಾಡಿ, ಮುಚ್ಚುವ ಸ್ಥಿತಿಯಲ್ಲಿದ್ದ ಚನ್ನರಾಯಪಟ್ಟಣ ಟಿಎಪಿಸಿಎಂಎಸ್ ಆಡಳಿತವನ್ನು ಜೆಡಿಎಸ್ ಪಕ್ಷ ಕಳೆದೊಂದು ದಶಕದಿಂದ ಅಧಿಕಾರ ನಡೆಸಿ ಲಾಭದತ್ತ ಮುನ್ನಡೆಸಿದೆ. ಈಗಾಗಲೇ 14 ಸ್ಥಾನಗಳ ಪೈಕಿ 7 ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿವೆ. ಉಳಿದ 7 ಸ್ಥಾನಗಳಿಗೆ ನಮ್ಮ ಪಕ್ಷದ ಬೆಂಬಲಿತರಾದ ಸಾಮಾನ್ಯ ಕ್ಷೇತ್ರದಿಂದ ಎಂ.ಆರ್. ಅನಿಲ್‌ಕುಮಾರ್, ತರಬೇನಹಳ್ಳಿ ನಂಜುಂಡೇಗೌಡ, ಸಾಮಾನ್ಯ ಮಹಿಳಾ ಕ್ಷೇತ್ರದಿಂದ ತಾರಾಮಣಿ ಆನಂದ್, ಮಮತ ಜಯಣ್ಣ, ಬಿಸಿಎಂಬಿ ಅಡಿ ಕುಂಬಾರಹಳ್ಳಿ ರಮೇಶ್, ಬಿಸಿಎಂ ಎ ನಿಂದ ಸಿ.ಜಿ.ಜಗದೀಶ್ ಮತ್ತು ಎಸ್‌ಸಿ ವರ್ಗದಿಂದ ರವಿಕುಮಾರ್ ಸ್ಪರ್ಧಿಸಿದ್ದಾರೆ. ಈಗಾಗಲೇ 2 ಸಾವಿರ ಮತದಾರರನ್ನು ಸಂಪರ್ಕಿಸಿ ಮತಪ್ರಚಾರ ನಡೆಸಲಾಗಿದೆ ಎಂದರು.

ಶಾಸಕ ಸಿ.ಎನ.ಬಾಲಕೃಷ್ಣ, ಹೆಚ್.ಡಿ.ರೇವಣ್ಣ ಮತ್ತು ಎಂಎಲ್ಸಿ ಡಾ. ಸೂರಜ್ ರೇವಣ್ಣ ಅವರ ಸೂಚನೆ ಮೇರೆಗೆ ಪ್ರಚಾರ ಕೈಗೊಂಡಿದ್ದು, ಸಂಘದ ಅಭಿವೃದ್ಧಿ ಪರಿಗಣಿಸಿ ತಾಲ್ಲೂಕಿನ ಎಲ್ಲ ಮತದಾರರು ಪಕ್ಷದ 7 ಮಂದಿಯನ್ನು ಗೆಲ್ಲಿಸುವ ಭರವಸೆ ಹೊಂದಿದ್ದೇವೆ ಎಂದರು.

# ವಾರಾಂತ್ಯದಲ್ಲಿ ಜೀ ಕನ್ನಡ ಕುಟುಂಬ ಅವಾರ್ಡ್ಸ್ ಮನರಂಜನೆ ಸಡಗರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಕನ್ನಡ ಕಿರುತೆರೆಯ ಮನರಂಜನೆಯ ಮಹಾರಾಜ ಎಂದೇ ಖ್ಯಾತಿ ಪಡೆದಿರುವ ಜೀ ಕನ್ನಡ ವಾಹಿನಿಯ ಸಂಬಂಧಗಳನ್ನು ಸಂಭ್ರಮಿಸುವ ಅತೀದೊಡ್ಡ ಹಬ್ಬ ಜೀ ಕನ್ನಡ ಕುಟುಂಬ ಅವಾರ್ಡ್ಸ್ -2025 ಕ್ಷಣಗಣನೆ ಶುರುವಾಗಿದೆ.

ಕೋಟಿ ಕಣ್ಣುಗಳು ಕಾತುರತೆಯಿಂದ ಕಾಯುತ್ತಿದ್ದ ಎಂಟರ್ಟೈನ್ಮೆಂಟ್‌ನ ಮಹಾಪರ್ವ ಇದೇ ತಿಂಗಳ 17, 18 ಮತ್ತು 19 ರಂದು ಜೀ ಕನ್ನಡ ವಾಹಿನಿಯಲ್ಲಿ ಸಂಜೆ 6.30 ರಿಂದ ಪ್ರಸಾರ ಆಗಲಿದೆ. ಇನ್ನು ಈ ಕಾರ್ಯಕ್ರಮವನ್ನು ಕರ್ನಾಟಕದ ಹೆಸರಾಂತ ನಿರೂಪಕ ಅಕುಲ್ ಬಾಲಾಜಿ ಮತ್ತು ನಿರೂಪಕಿ ಅನುಶ್ರೀ ನಡೆಸಿಕೊಡಲಿದ್ದಾರೆ.

ಈ ವರ್ಷದ ಜೀ ಕನ್ನಡ ಕುಟುಂಬ ಅವಾರ್ಡ್ಸ್ ನಲ್ಲಿ ಫೇವರಿಟ್ ನಟ, ಫೇವರಿಟ್ ನಟಿ, ಫೇವರಿಟ್ ಜೋಡಿ, ಫೇವರಿಟ್ ಸೀರಿಯಲ್, ಫೇವರಿಟ್ ರಿಯಾಲಿಟಿ ಶೋ ಮತ್ತು ಫೇವರಿಟ್ ನಿರೂಪಕ/ನಿರೂಪಕಿ ಅನ್ನುವ ಪ್ರಮುಖ 6 ಕೆಟಗರಿಗಳಿರಲಿವೆ. ಈ ಆರು ಪ್ರಮುಖ ವಿಭಾಗಗಳ ಜೊತೆಗೆ ಇನ್ನೂ ಅನೇಕ ವಿಭಾಗಗಳಲ್ಲಿ ವಿಜೇತರ ಘೋಷಣೆಯೂ ಇರಲಿದೆ. ಇನ್ನು ಈ ಬಾರಿಯ ಜೀ ಕನ್ನಡ ಕುಟುಂಬ ಅವಾರ್ಡ್ಸ್ ಅಮೋಘ ಕ್ಷಣಗಳಿಗೆ ಸಾಕ್ಷಿಯಾಗಿದ್ದು, ಕನ್ನಡ




ಚಲನಚಿತ್ರ ತಾರೆಯರು ಹಾಗು ಕಿರುತೆರೆ ಕಲಾವಿದರು ಜೊತೆಯಾಗಿ ಸೇರಿ ಸಂಭ್ರಮಿಸಿದ್ದು ಇದರ ಮತ್ತೊಂದು ಆಕರ್ಷಣೆ. ನೆಚ್ಚಿನ ತಾರೆಯರು ಅವರ ಅವಿಸ್ಮರಣೀಯ ಸುಂದರ ಮತ್ತು ನೋವಿನ ಕ್ಷಣಗಳನ್ನು ಮೆಲುಕು ಹಾಕುತ್ತಾ ವೀಕ್ಷಕರಿಗೆ ಇನ್ನಷ್ಟು ಹತ್ತಿರವಾಗುವದರಲ್ಲಿ ಎರಡು ಮಾತಿಲ್ಲ.

ಜೀ ಕನ್ನಡ ಅವಾರ್ಡ್ 2025ರಲ್ಲಿ ಚಂದನವನದ ಡಿವೈನ್ ಸ್ಟಾರ್ ಮತ್ತು ನಿರ್ದೇಶಕ ರಿಷಬ್ ಶೆಟ್ಟಿ, ನಟಿ ರುಕ್ಮಿಣಿ ವಸಂತ್ ಮತ್ತು ಮೈಸೂರಿನ ಮಹಾರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉಪಸ್ಥಿತರಿರುವರು. ಜೀ ಕನ್ನಡ ಅವಾರ್ಡ್‌ನಲ್ಲಿ ವಿಶೇಷವಾಗಿ 'ವೀಕೆಂಡ್ ವಿತ್ ರಮೇಶ್ ಮಿನಿಯೇಚರ್ ಕೂಡ ಇರಲಿದ್ದು, ರಿಷಬ್ ಶೆಟ್ಟಿ ಮತ್ತು ಹಿರಿಯ ನಟ ರಮೇಶ್ ಅವರ ಮಾತುಕತೆ ಈ ಕಾರ್ಯಕ್ರಮದ ಮತ್ತೊಂದು ಹೈಲೈಟ್ ಆಗಿತ್ತು.

ಇನ್ನು ಇದರ ಬಗ್ಗೆ ಮಾತನಾಡಿದ ಜೀ ಕನ್ನಡ ಮತ್ತು ಕನ್ನಡ ಜೀ5 ನ ಬಿಸಿನೆಸ್ ಹೆಡ್ ದೀಪಕ್ ಶ್ರೀರಾಮುಲು ಅವರು ಕನ್ನಡ ಟೆಲಿವಿಷನ್ ಕುಟುಂಬದ ಪ್ರತಿಭೆ, ಸೃಜನಶೀಲತೆ ಮತ್ತು ಅದ್ಭುತ ಆತ್ಮಸ್ಫೂರ್ತಿಯ ಆಚರಣೆಯೇ ಕುಟುಂಬ ಅವಾರ್ಡ್ಸ್. ಇನ್ನು ಜೀ ಕನ್ನಡ 19 ವರುಷ ಪೂರೈಸಿದ ಈ ಶುಭ ಸಂದರ್ಭದಲ್ಲಿ ವೀಕ್ಷಕರಿಗೆ ಇನ್ನಷ್ಟು ಮನರಂಜನೆ ಕೊಡೋದು ನಮ್ಮ ಮುಖ್ಯ ಗುರಿ ಆಗಿತ್ತು.

ಅದಕ್ಕೆ ಬದ್ಧವಾಗಿ ನಾವು ಈ ವರುಷ 'ನಾ ನಿನ್ನ ಬಿಡಲಾರೆ', 'ಕರ್ಣ' ಮತ್ತು 'ಶ್ರೀ ರಾಘವೇಂದ್ರ ಮಹಾತ್ಮೆ' ಎಂಬ ಪ್ರಸಿದ್ಧ ಧಾರಾವಾಹಿಗಳ ಜೊತೆಗೆ 'ನಾವು ನಮ್ಮವರು' ಎಂಬ ವಿಭಿನ್ನ ರಿಯಾಲಿಟಿ ಶೋ ಅನ್ನು ಜನರ ಮುಂದಿಟ್ಟಿದ್ದೇವೆ. ಇನ್ನು ನಮ್ಮ ವೀಕ್ಷಕರು ಈ ಎಲ್ಲಾ ಕಾರ್ಯಕ್ರಮಗಳನ್ನು ಮನಸಾರೆ ಮೆಚ್ಚಿದ್ದು ನಮ್ಮ ಹುರುಪನ್ನು ಮತ್ತಷ್ಟು ಹೆಚ್ಚಿಸಿದೆ. ಟೆಲಿವಿಷನ್ ಜೊತೆಗೆ ಓಟಿಟಿ ಪ್ಲಾಟ್‌ಫಾರ್ಮ್ ಕನ್ನಡ ಜೀ5 'ನಮ್ಮ ಭಾಷೆ, ನಮ್ಮ ಕಥೆಗಳು' ಮೂಲಕ ಕನ್ನಡದ ಕಥೆಗಳಿಗೆ ಜೀವ ತುಂಬುವ ಕೆಲಸವನ್ನು ಮುಂದುವರೆಸಿದೆ. ಮತ್ತೊಂದೆಡೆ ಮೈಕ್ರೋ-ಸರಣಿ ಅಪ್ಲಿಕೇಶನ್ ಬುಲೆಟ್ ಇಂದಿನ ಪೀಳಿಗೆಗಳಿಗೆ ಕಥೆ ಹೇಳುವ ಕಲೆಗೆ ಹೊಸ ಅರ್ಥ ನೀಡುತ್ತಿದೆ. ಇನ್ನು ನಮಗೆ ವೀಕ್ಷಕರು ನೀಡುವ ಸಪೋರ್ಟ್ ಮತ್ತು ಪ್ರೀತಿ ಅಭೂತಪೂರ್ಣ ಎಂದರು.

ಯಾರು ಯಾವ ಪ್ರಶಸ್ತಿಗೆ ಭಾಜೀನರಾದರು, ಯಾರು ಯಾವ ಹಾಡಿಗೆ ನೃತ್ಯ ಮಾಡಿದರು, ಯಾರು ಯಾವ ಉಡುಗೆಯಲ್ಲಿ ಮಿಂಚಿದರು ಹೀಗೆ ಮತ್ತಷ್ಟು ಇಂಟೆರೆಸ್ಟಿಂಗ್ ವಿಷಯಗಳನ್ನು ತಿಳಿದುಕೊಳ್ಳಲು ಮತ್ತು ನಗು, ತರ್ಲೆ, ಅಳು, ನೋವು, ನಲಿವು ಮತ್ತು ಇನ್ನಷ್ಟು ಭಾವನೆಗಳ ಸಮ್ಮಿಲನವನ್ನು ಕಣ್ತುಂಬಿಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ.

# ಸದೃಢ ಸಮಾಜಕ್ಕೆ ರೆಡ್ ಕ್ರಾಸ್ ಕೊಡುಗೆ ಅನನ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ ನಿರಂತರವಾಗಿ ರಕ್ತದಾನ ಶಿಬಿರ ಆಯೋಜಿಸುವ ಮೂಲಕ ಸಮಾಜಕ್ಕೆ ಅತ್ಯಮೂಲ್ಯ ಕೊಡುಗೆ ಸಲ್ಲಿಸುತ್ತಿದೆಯೆಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಮತ್ತು ಐಎಸ್‌ಟಿಇ ವತಿಯಿಂದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ಸ್ವಯಂ




ಪ್ರೇರಿತ ರಕ್ತದಾನ ಶಿಬಿರಗಳನ್ನು ನಾಡಿನಲ್ಲಿ ನಿರಂತರವಾಗಿ ಆಯೋಜಿಸುತ್ತಾ, ರೋಗಿಗಳಿಗೆ ಸಂಜೀವಿನಿಯಂತೆ ಇರುವ ಸಂಸ್ಥೆ ಎಂದರೆ ಅದು ರೆಡ್ ಕ್ರಾಸ್ ಎಂದು ಬಣ್ಣಿಸಿದರು. ರಕ್ತಕ್ಕೆ ಪರ್ಯಾಯವಿಲ್ಲ. ಅಪಘಾತ, ಹೆರಿಗೆ, ಶಸ್ತ್ರಚಿಕಿತ್ಸೆ ಮುಂತಾದ ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ.

ಆರೋಗ್ಯವಂತರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ. ಒಬ್ಬರು ರಕ್ತದಾನ ಮಾಡುವುದರಿಂದ ಮೂರು ಜನರ ಪ್ರಾಣ ಉಳಿಸಬಹುದು. ಆದ್ದರಿಂದ ಯಾವ ಭಯವಿಲ್ಲದೆ ರಕ್ತದಾನ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಮೈಸೂರು ವಲಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಪ್ರಾಂಶುಪಾಲ ಡಾ. ಡಿ.ಪಿ.ಗಿರೀಶ್, ಜಿಲ್ಲಾ ರೆಡ್ ಕ್ರಾಸ್ ಸಭಾಪತಿ ಹೆಚ್.ಪಿ.ಮೋಹನ್, ಕಾರ್ಯದರ್ಶಿ ಶಬ್ಬಿರ್ ಅಹಮದ್, ಖಜಾಂಚಿ ಹೆಚ್.ಡಿ. ಜಯೇಂದ್ರ ಕುಮಾರ್, ನಿರ್ದೇಶಕರಾದ ಎಸ್.ಎಸ್ .ಪಾಷಾ, ಸುಬ್ಬಸ್ವಾಮಿ, ಸುರೇಶ್, ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮ ಸಂಯೋಜಕ ಡಾ. ಎಲ್.ತಿಮ್ಮೇಶ್, ಐಎಸ್‌ಟಿಇ ಘಟಕದ ಕಾರ್ಯಕ್ರಮ ಸಂಯೋಜಕ ಡಾ. ತೀರ್ಥೇಗೌಡ ಉಪಸ್ಥಿತರಿದ್ದರು.

# ನೇತ್ರ ಜೀವನದ ಅವಿಭಾಜ್ಯ ಅಂಗ: ಡಾ. ಸ್ಮಿತಾ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ರಕ್ತದಲ್ಲಿ ಸಕ್ಕರೆ ಪ್ರಮಾಣ ಹೆಚ್ಚಾಗುತ್ತಾ ಹೋದಂತೆ ಕಣ್ಣುಗಳು ಮಂಜಾಗುವುದು ಸಹಜ ಎಂದು ಹಾಸನ ಅಮ್ಮ ಕಣ್ಣಿನ ಆಸ್ಪತ್ರೆ ಡಾ. ಸ್ಮಿತಾ ತಿಳಿಸಿದರು.

ಪಟ್ಟಣದಲ್ಲಿರುವ ಆಲೂರು ಕ್ಲಿನಿಕ್ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಮತ್ತು ಅಮ್ಮ ಚಾರಿಟೆಬಲ್ ಟ್ರಸ್ಟ್ ನಿಂದ ಏರ್ಪಡಿಸಿದ್ದ ಉಚಿತ ಕಣ್ಣು ತಪಾಸಣಾ ಮತ್ತು ಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿ, ಕಣ್ಣು ಮನುಷ್ಯನ ಜೀವನಕ್ಕೆ ಅವಿಭಾಜ್ಯ ಅಂಗವಾಗಿದೆ.

ಸಾಮಾನ್ಯವಾಗಿ 40 ವಯಸ್ಸು ಕಳೆದ ನಂತರ ಕಣ್ಣು ದೃಷ್ಟಿಯಲ್ಲಿ ಮಂಕು



ಕವಿಯುವುದು ಸಹಜ. ಇತ್ತೀಚೆಗೆ ಮನುಷ್ಯ ಆಧುನಿಕ ಶೈಲಿಯಲ್ಲಿ ತನ್ನ ಜೀವನ ಸಾಗಿಸುತ್ತಿರುವುದು, ರೆಡಿಮೆಡ್ ಆಹಾರ, ರಸ್ತೆ ಬದಿ ತಯಾರಿಸುವ ಆಹಾರ ಬಳಸುವುದರಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಅದರಿಂದ ರಕ್ತದಲ್ಲಿ ಅಧಿಕ ಸಕ್ಕರೆ ಪ್ರಮಾಣ ವೃದ್ಧಿಸುವುದರಿಂದ ಕಣ್ಣಿನ ದೃಷ್ಟಿಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಪುಟ್ಟ ಮಕ್ಕಳು ಮೊಬೈಲ್ ಬಳಸುವುದರಿಂದ ಕಣ್ಣು ದೋಷಕ್ಕೀಡಾಗುತ್ತಿದ್ದಾರೆ. ಪೋಷಕರು ಸಾಧ್ಯವಾದಷ್ಟು ಮಕ್ಕಳು ಮೊಬೈಲ್ ಕಡಿಮೆ ಬಳಸುವಂತೆ ಜಾಗೃತೆ ವಹಿಸಬೇಕು ಎಂದರು.

ಡಾ. ಗಿರೀಶ್ ಬಸಪ್ಪ ಮಾತನಾಡಿ, ಕಣ್ಣು ದೃಷ್ಟಿಯಲ್ಲಿ ದೋಷ ಉಂಟಾಗಲು ಹಲವು ಕಾರಣಗಳಿವೆ. ಸರಿಯಾಗಿ ದೃಷ್ಟಿ ಕಾಣಿಸದಿದ್ದರೆ ಒತ್ತಡದಿಂದ ನೋಡಲು ಪ್ರಯತ್ನ ಮಾಡಬಾರದು. ದೀರ್ಘಕಾಲದವರೆಗೆ ಪರದೆ ನೋಡುವುದು, ಮಂದ ಬೆಳಕಿನಲ್ಲಿ ಓದುವುದು ಅಥವಾ ಅತಿಯಾದ ಕೆಲಸವು ಕಣ್ಣಿನ ಸ್ನಾಯುಗಳ ಮೇಲೆ ಒತ್ತಡವನ್ನು ಉಂಟು ಮಾಡುತ್ತದೆ. ಒತ್ತಡ ಹೆಚ್ಚಾದರೆ ತಲೆನೋವಿನ ಜೊತೆಗೆ ದೃಷ್ಟಿ ಮಂದವಾಗುತ್ತದೆ. ಅದರಿಂದ ಕೂಡಲೇ ತಜ್ಞ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು ಎಂದರು.

ಶಿಬಿರದಲ್ಲಿ ಡಾ. ಕವಿತಾ ಗಿರೀಶ್, ದಾದಿಯರಾದ ಭವಾನಿ, ಪವಿತ್ರ, ತಾರಾಮಣಿ, ಪ್ರಿಯಾಂಕ, ಲಕ್ಷ್ಮಿ ಉಪಸ್ಥಿತರಿದ್ದರು.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-18

**1648:** ವೆಸ್ಟ್‌ಫೇಲಿಯಾ ಒಪ್ಪಂದದ ಮೂಲಕ ಮೂವತ್ತಾರು ವರ್ಷಗಳ ಯುದ್ಧ ಅಂತ್ಯಗೊಂಡಿತು. ಇದು ಯೂರೋಪಿನ ಧಾರ್ಮಿಕ ಮತ್ತು ರಾಜಕೀಯ ನಕ್ಷೆಯನ್ನು ಬದಲಿಸಿದ ಪ್ರಮುಖ ಘಟನೆ.

**1867:** ಅಲಾಸ್ಕಾ ಪ್ರಾಂತ್ಯವನ್ನು ಅಮೆರಿಕಾದ ಭಾಗವನ್ನಾಗಿ ಘೋಷಿಸಲಾಯಿತು. ರಷ್ಯಾದಿಂದ ಅಮೆರಿಕಾ ಖರೀದಿಸಿದ್ದ ಅಲಾಸ್ಕಾ ಈ ದಿನ ಅಧಿಕೃತವಾಗಿ ಅಮೆರಿಕಾದ ರಾಜ್ಯವಾಯಿತು.

**1922:** ಬಿಬಿಸಿಯ ಸಂಸ್ಥಾಪನೆ ನಡೆಯಿತು. ಜಗತ್ತಿನ ಮೊದಲ ಸಾರ್ವಜನಿಕ ಪ್ರಸಾರ ಸಂಸ್ಥೆಗಳಲ್ಲಿ ಒಂದು.

**1967:** ಸೋವಿಯತ್ ಯೂನಿಯನ್‌ನ ವೆನೆರಾ4 ಯಾನವು ಶುಕ್ರ ಗ್ರಹದ ವಾತಾವರಣವನ್ನು ತಲುಪಿತು. ಮಾನವ ನಿರ್ಮಿತ ಯಂತ್ರ ಮೊದಲ ಬಾರಿಗೆ ಇನ್ನೊಂದು ಗ್ರಹದ ವಾತಾವರಣವನ್ನು ವಿಶ್ಲೇಷಿಸಿದ ದಿನ.

**2007:** ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಬೆನಜೀರ್ ಭುಟ್ಟೋ ವಲಸೆಯಿಂದ ವಾಪಸು ಬಂದು ದೇಶಕ್ಕೆ ಮರಳಿದರು.

### ಜನನ

**1859:** ಅಮೆರಿಕಾದ ತಾತ್ವಿಕ ಮತ್ತು ಲೇಖಕ ಹೆನ್ರಿ ಬೆರ್ಗ್ಸನ್

**1950:** ಭಾರತೀಯ ಹಾಸ್ಯನಟ ಮತ್ತು ನಟ ಓಂ ಪುರಿ

### ಮರಣ

**1931:** ಪ್ರಸಿದ್ಧ ಸಂಶೋಧಕ ಥಾಮಸ್ ಆಲ್ವಾ ಎಡಿಸನ್

**2011:** ಪ್ರಸಿದ್ಧ ಗಣಿತಜ್ಞ ಜಾನ್ ಮ್ಯಾಕಾರ್ಥಿ

# ಡಿಕೆಶಿ ಜನ ಮೆಚ್ಚುವ ಕೆಲಸ ಮಾಡಲಿ: ಅದೃಷ್ಟ ತಾನಾಗೇ ಬರುತ್ತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಂದುಕೊಂಡಿದ್ದನ್ನು ಸಾಧಿಸಲು ಒಂದು ಮೆಟ್ಟಿಲು ಮಾತ್ರ ಬಾಕಿಯಿದೆ ಎಂದು ಮುಖ್ಯಮಂತ್ರಿಯಾಗುವ ಭವಿಷ್ಯವನ್ನು ರಾಜಗುರು ದ್ವಾರಕಾನಾಥ್ ನುಡಿದರು.

ಶುಕ್ರವಾರ ಹಾಸನಾಂಬ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ದೇವಿ ದರ್ಶನ ವೇಳೆ ಡಿ.ಕೆ.ಶಿವಕುಮಾರ್ ನಾರಾಯಣಿ ಮಂತ್ರ ಪಠಿಸಿದ್ದಾರೆ. ನಾರಾಯಣಿ ಎಂದರೆ ಮಾತೃ ಸ್ವರೂಪಿ ಎಂದರ್ಥ. ಬ್ರಹ್ಮ, ವಿಷ್ಣು, ಮಹೇಶ್ವರರು ಇಲ್ಲದೇ ಯಾವ ಕೆಲಸವೂ ಆಗುವುದಿಲ್ಲ. ಗರ್ಭಗುಡಿಯಲ್ಲಿ ಪ್ರಸಾದ ಆಗಿದೆ ಎಂದರೆ ಮುಂದೆ ಒಳ್ಳೆಯ ಕಾಲ ಬರುತ್ತದೆಂದು ಗ್ರಹಿಸಬಹುದು. ಮುಂದೆ ಆಗುವ ಸೂಚನೆಯನ್ನು ದೇವಿ ನಾನಾ ರೂಪದಲ್ಲಿ ತೋರಿಸುತ್ತಾಳೆ. ಅವರ ಕೋರಿಕೆಯನ್ನು



ದೇವಿ ನೆರವೇರಿಸುತ್ತಾಳೆ ಎಂದರು.

ಮನುಷ್ಯರನ್ನು ನಂಬಿ ಕೆಟ್ಟವರಿದ್ದಾರೆ ಹೊರತು ದೇವರನ್ನು ನಂಬಿದವರು ಯಾರೂ ಕೆಟ್ಟಿಲ್ಲ. ಈಗಿರುವ ಅವಕಾಶವನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಂಡು ಸರ್ಕಾರಕ್ಕೆ ಒಳ್ಳೆಯ ಹೆಸರು ತರಬೇಕು. ಸರ್ಕಾರಕ್ಕೆ ಅಂಟಿರುವ ಕೆಟ್ಟ ಹೆಸರನ್ನು ನಿವಾರಿಸಬೇಕು. ಜನರಿಗೆ ಕೊಟ್ಟ ಭರವಸೆ ಈಡೇರಿಸಬೇಕು. ಕಳೆದ ಎರಡೂ ವರ್ಷಗಳಿಂದ ರಾಜ್ಯದಲ್ಲಿ ಜನರ ಮನಮುಟ್ಟುವಂತಹ ಅಭಿವೃದ್ಧಿ ಕೆಲಸಗಳಾಗಿಲ್ಲ. ಇನ್ನೂ ಎರಡೂವರೆ ವರ್ಷ ಸಮಯವಿದ್ದು ಶಿವಕುಮಾರ್ ಅವರು ಅದರ ಕಡೆಗೆ ಗಮನ ಹರಿಸಬೇಕೆಂದು ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿದರು. ಮಾಡಿದ ಕೆಲಸಕ್ಕೆ ತಾಯಿ ಊಟ ಕೊಟ್ಟೇ ಕೊಡುತ್ತಾಳೆ. ಅದರಿಂದ ಹೊಟ್ಟೆ ತುಂಬುತ್ತದೆ. ಇಷ್ಟಾರ್ಥ ಸಿದ್ದಿಸುತ್ತಾಳೆಂಬುದರಲ್ಲಿ ಯಾವ ಸಂದೇಶ ಬೇಡ. ಎಲ್ಲರಿಗೂ ಒಳಿತಾಗಲಿ ಎಂದರು.

ಪುಣ್ಯ ಏಕಾದಶಿ ದಿನದಿಂದ ದೇವರಲ್ಲಿ ಪ್ರಾರ್ಥಿಸಿದರೆ ಅಂದುಕೊಂಡದ್ದು ನೆರವೇರುತ್ತದೆ. ಹಾಸನಾಂಬ ಕ್ಷೇತ್ರ ಪ್ರಪಂಚದಲ್ಲೇ ದೊಡ್ಡ ಸ್ಥಾನವಾಗಲಿ. ಸಕಲವೂ ಒಳಿತಾಗಬೇಕೆಂದರೆ ಪುರೋಹಿತರು ಸಕಾಲಕ್ಕೆ ಪೂಜೆ ಮಾಡಬೇಕು. ದೇವಸ್ಥಾನದ ಒಳಗೆ ಭಕ್ತರನ್ನು ಉಪಚರಿಸುವ ರೀತಿ ಸರಿಯಾಗಿಲ್ಲ. ಹಾಸನಾಂಬ ಮೂರ್ತಿ ನೋಡುವ ಮೊದಲೇ ಅಲ್ಲಿನ ಸಿಬ್ಬಂದಿ ತಳ್ಳಿಬಿಡುತ್ತಾರೆ. ಭಕ್ತರು ದು:ಖಪಟ್ಟರೆ ಅದನ್ನು ರಾಜ್ಯ ಆಳವವರು ಅನುಭವಿಸಬೇಕಾಗುತ್ತದೆ. ಆ ದುಃಖವನ್ನು ಕೊಡುವುದು ಬೇಡ. ಅರ್ಧ ನಿಮಿಷದಲ್ಲಿ ಏನು ಆಗುವುದಿಲ್ಲ ದೇವಿಯನ್ನು ಕಣ್ತುಂಬ ನೋಡಲು ಅವಕಾಶ ಮಾಡಿಕೊಡಬೇಕು. ನಿಮ್ಮ ಕೈಯಲ್ಲಿ ಎಳೆಸಿಕೊಳ್ಳಲು ಇಲ್ಲಿಯವರೆಗೂ ಬರಬೇಕಾ. ಭಕ್ತರನ್ನು ಎಳೆದು ಹಾಕುವುದನ್ನು ನಿಲ್ಲಿಸಿ ಸುಗಮ ದರ್ಶನಕ್ಕೆ ಅವಕಾಶ ಮಾಡಬೇಕೆಂದು ಜಿಲ್ಲಾಡಳಿತಕ್ಕೆ ಮನವಿ ಮಾಡಿದರು.

**ಗ್ರಾಮ ಪಂಚಾಯಿತಿ ಕಾರ್ಯಾಲಯ**
**ದೊಡ್ಡಗೇಣಿಗೆರೆ**
ಹಾಸನ ತಾಲ್ಲೂಕು — ಹಾಸನ ಜಿಲ್ಲೆ

**ಪ್ರಕಟಣೆ**

ದಿನಾಂಕ 18-10-2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ 01/25-26

ದಿನಾಂಕ 18 - 10 - 2025 ಗ್ರಾಮ ಪಂಚಾಯತಿ ಸೋಲಾರ್ ರೂಫ್ ಟಾಪ್ ಅಳವಡಿಸಲು ಹಣ ಕಾಯ್ದಿರಿಸಿದ್ದು ಆಸಕ್ತ ಗುತ್ತಿಗೆದಾರರು ಅರ್ಜಿ ಸಲ್ಲಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇ ಎಮ್ ಡಿ ಮತ್ತು ಹಾಗೂ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ್ ತೆರೆಯುವ ದಿನಾಂಕ ಹಾಗೂ ಇತರೆ ವಿವರಗಳನ್ನು ಈ ಕಚೇರಿಯಿಂದ ಪಡೆಯಬಹುದು.

ಸಹಿ
ಪಿ ಡಿ ಓ
ಗ್ರಾ ಪಂ ದೊಡ್ಡಗೇಣಿಗೆರೆ

ಸಹಿ
ಅಧ್ಯಕ್ಷರು
ಗ್ರಾ ಪಂ ದೊಡ್ಡಗೇಣಿಗೆರೆ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248